**ಸಾವಿತ್ರಿ ಒಮ್ಮೆ ಎಲ್ಲರ ಮುಖ ನೋಡಿದಳು. ಯಾರ ಮುಖದಲ್ಲಿಯೂ ನಗುವಿಲ್ಲ. ಇದೇ ಎಂದು ಹೇಳಲಾರದ ನೋವು ಕಾಣಿಸುತ್ತಿದೆ. ಕದಲಿಸಿದರೆ ಕಣ್ಣೀರ ಸಮುದ್ರ ಉಕ್ಕುತ್ತದೆಯೇನೋ ಎನ್ನುವಷ್ಟು ದುಃಖವನ್ನು ತಡೆಹಿಡಿದಿದ್ದಾರೆ.**

ಪೊಲೀಸರು ನನ್ನನ್ನು ಬಿಡುತ್ತಿಲ್ಲ. ಒಂದು ದೊಡ್ಡ ತಲೆ ಹಿಡಿದುಕೊಡದಿದ್ದರೆ... ಒಂದೆರಡು ತುಪಾಕಿಗಳನ್ನು ತೆಗೆದುಕೊಂಡು ಬರದಿದ್ದರೆ ನನ್ನನ್ನು ಜೀವಂತವಾಗಿ ಉಳಿಸುವುದಿಲ್ಲ ಎನ್ನುತ್ತಿದ್ದಾರೆ. ಹೋರಾಟಕ್ಕೆ ದ್ರೋಹ ಬಗೆಯಲಾರೆನಲ್ಲವೇ! ಮೃತ್ಯು ನನ್ನನ್ನು ನೆರಳಿನಂತೆ ಹಿಂಬಾಲಿಸುತ್ತಿದೆ. ನಿನ್ನನ್ನು ಭೇಟಿಯಾದಾಗ ಎಲ್ಲ ವಿಷಯ ಮಾತನಾಡೋಣ. ಮಗ ನಾಗರಾಜನನ್ನು ಹುಷಾರಾಗಿ ನೋಡಿಕೋ.' ನಾಲ್ಕು ಮಾತುಗಳು.

ಆ ಪತ್ರ, ಎನ್‌ಕೌಂಟರ್ ಸುದ್ದಿ ಎರಡೂ ಒಟ್ಟಿಗೇ ತಲುಪಿದವು. ಬೊಂಬಾಯಿಯಲ್ಲಿ ಇದ್ದ ಗಂಡ ಊರಿನ ಪಕ್ಕದ ದೊಡ್ಡ ಗುಟ್ಟದಲ್ಲಿ ಶವವಾಗಿ ಕಂಡ.

ಮೊದಲಿಗೆ ತಂದೆಯನ್ನು ಗಂಡನಲ್ಲಿ ಕಂಡಳು. ನಂತರ ಗಂಡನನ್ನು ಮಗನಲ್ಲಿ ನೋಡಿದಳು. 25 ವರ್ಷಗಳ ನಂತರ ಮಗ ಮತ್ತೆ ಗಾಯವನ್ನು ಕೆರೆದ. ಆಗ ಚರ್ಚೆಯ ಹೆಸರಿನಲ್ಲಿ ಸರ್ಕಾರ ಹೆಡೆಯ ನೆರಳನ್ನು ಚಾಚಿತು. ಊರೆಲ್ಲ ಮತ್ತೆ ಕೆಂಪಾಯಿತು. ಮೊದಲಿನಂತೆ ಮನೆ ಕಳೆಗಟ್ಟತೊಡಗಿತು.

ಸಾವಿತ್ರಿಗೆ ಆತಂಕ ಶುರುವಿಟ್ಟಿತು. ನಾಗರಾಜನನ್ನು ಎಚ್ಚರಿಸಿದಳು. ಎಲ್ಲಿ ಏನು ನಡೆಯಿತೋ ಅರಿವಿಗೆ ಬಾರದಾಯಿತು. ಆದರೆ ಹಾವು ಬುಸುಗುಡುತ್ತಿದೆ. ಇರುವೆಗಳ ಹುತ್ತ ಚದುರಿತು. ಶಾಂತಿ ಚರ್ಚೆಗಳು ವಿಫಲವಾದವು.

ಒಂದು ರಾತ್ರಿ ಮಗ, 'ಅಮ್ಮಾ... ಒಳ್ಳೆಯ ಅವಕಾಶ. ಯಾರಿಗೂ ಗೊತ್ತಿಲ್ಲ. ರಾತ್ರಿ ಹಗಲಾಗುವಹೊತ್ತಿಗೆ ಲಕ್ಷಾಧಿಪತಿಗಳಾಗಿಬಿಡಬಹುದು. ನೌಕರಿಯನ್ನೂ ಕೊಡುತ್ತೇವೆನ್ನುತ್ತಿದ್ದಾರೆ. ನಮಗೇನು ಬಹಳ ಕಷ್ಟವಿಲ್ಲ. ಒಂದಿಬ್ಬರನ್ನು ಹಿಡಿದುಕೊಡೋಣ. ಜಸ್ಟ್ ಒಂದು ಫೋನ್ ಕಾಲ್ ಅಷ್ಟೆ' ಗುಟ್ಟಾಗಿ ಹೇಳಿದ್ದು ಕೇಳಿ ಸಾವಿತ್ರಿಗೆ ಆಶ್ಚರ್ಯವಾಯಿತು.

ಅವನ ಮುಖದಲ್ಲಿ ಎಳ್ಳಷ್ಟಾದರೂ ಪಶ್ಚಾತ್ತಾಪ ಇದೆಯಾ ಎಂದು ಆಸೆಯಿಂದ ನೋಡಿದಳು. ನಿರಾಸೆಯಿಂದ ಕುಗ್ಗಿಹೋದ ಅವಳು, 'ನಿನ್ನನ್ನ ಅಥವಾ ನಿನ್ನ ತಲೆಮಾರಿನವರನ್ನು ಅನ್ನಬೇಕಾ ಇಲ್ಲವೇ ಒಂದು ಪ್ರಜ್ಞೆಯಿಲ್ಲದ ತಲೆಮಾರನ್ನು ತಯಾರು ಮಾಡಿದ್ದಕ್ಕಾಗಿ ವ್ಯವಸ್ಥೆಯನ್ನು ನಿಂದಿಸಬೇಕೋ ಅರ್ಥವಾಗುತ್ತಿಲ್ಲವೋ... ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೀಯೋ ಗೊತ್ತಾ' ಎನ್ನುತ್ತ ಬೇಸರಪಟ್ಟಳು.

ಅದಾಗಲೇ ನಾಗರಾಜನಿಗೆ ಪೊಲೀಸರೊಂದಿಗೆ ಸ್ನೇಹ. ಅಭ್ಯಾಸಗಳಲ್ಲಿ ಬದಲಾವಣೆ. ಸಾವಿತ್ರಿಗೆ ಇದನ್ನೆಲ್ಲ ಸಹಿಸಲಾಗುತ್ತಿಲ್ಲ. ಇಲ್ಲೇ ಇದ್ದರೆ ಹಣಕ್ಕಾಗಿ ಆ ಕೆಲಸ ಮಾಡಿಯೇಬಿಡುತ್ತಾನೆಂದು ಭಯವಾಯಿತು. ಕೂಡಲೇ ಕಾಡಿಬೇಡಿ ಒಪ್ಪಿಸಿ ದುಬೈಗೆ ಕಳುಹಿಸಿದಳು.

ಚಂದ್ರು ಹೇಳುವುದು ಮುಗಿದಂತಿದೆ. ''ದೊಡ್ಡಮ್ಮಾ... ಏಳು... ಬೆಳಗಾಗಿದೆ. ಹೋಗಬೇಕು. ಇದು ನಮ್ಮ ಭಾರತದಂತಲ್ಲ. ಟೈಮ್ ಅಂದರೆ ಟೈಮ್. ನಿಮಿಷ ಕೂಡ ಹಿಂದೆಮುಂದೆ ಆಗಬಾರದು'' ಎಂದ. ಸಾವಿತ್ರಿ ಎದ್ದು ಕುಳಿತಳು. ಹೊರಗಿದ್ದ ಇಬ್ಬರು ಮೂವರು ಬಂದರು.

''ನಾಗರಾಜ ಅವರ ಅಮ್ಮ'' ಸಾವಿತ್ರಿಯನ್ನು ತೋರಿಸುತ್ತ ಹಿಂದೆ ಇದ್ದವರಲ್ಲಿ ಯಾರೋ ಹೇಳಿದರು.